ಸರಿದೂಗಿಸುತ್ತೀರಿ? ನಮ್ಮ ಡಿವಿಜನ್‌ಗೆ ಸುಮಾರು ೧೦೦ ಸ್ವಂತ ಕಟ್ಟಡಗಳಷ್ಟು ತಾರತಮ್ಯವನ್ನು ತೋರಿಸಿದ್ದೀರಿ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು?

ಶ್ರೀ ಡಿ. ಮಂಜುನಾಥ್.--ಮಾನ್ಯ ಅಧ್ಯಕ್ಷರೇ ಕಟ್ಟಡಗಳನ್ನು ಕಟ್ಟಿಸುವ ಸಲುವಾಗಿ ಈ ವರ್ಷ ನಾವು ಬಡ್ಜೆಟ್‌ನಲ್ಲಿ ಸ್ವಲ್ಪ ಜಾಸ್ತಿ ಹಣವನ್ನು ಇಟ್ಟಿದ್ದೇವೆ. ಒಂದೇ ಸಲ ಎಲ್ಲಾ ಕಡೆ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಕಷ್ಟವಾಗುತ್ತದೆ. ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಯೋಜನೆಯ ಅಡಿಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವಂತೆ ಕ್ರಮ ಕೈಗೊಂಡಿದ್ದೇವೆ. ಹಂತ ಹಂತವಾಗಿ ಎಲ್ಲಾ ಕಡೆಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಲಾಗುವುದು. ಕಳೆದ ವರ್ಷಕ್ಕಿಂತ ಈ ವರ್ಷ ಈ ಬಾಬಿಗೆ ಸ್ವಲ್ಪ ಜಾಸ್ತಿ ಹಣವನ್ನು ಇಟ್ಟಿದ್ದೇವೆ ಗುಲ್ಬರ್ಗಾ ಜಿಲ್ಲೆಗೆ ತಾರತಮ್ಯವಾಗಿದೆ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಆ ಬಗ್ಗೆ ವಿಚಾರಣೆ ಮಾಡಿ ಆಗಿರುವಂತಹ ತಾರತಮ್ಯವನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.--ತಾವು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿಯೇ ಇದೆ. ಅದನ್ನು ಮತ್ತೆ ವಿಚಾರ ಮಾಡತಕ್ಕಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಡಿ. ಮಂಜುನಾಥ್.--ಇದರಲ್ಲಿ ಜಾಸ್ತಿ ಮತ್ತು ಕಡಿಮೆ ಎನ್ನುವ ಪ್ರಶ್ನೆ ಬರುವುದಿಲ್ಲ. ಹಂತ ಹಂತವಾಗಿ ಎಲ್ಲಾ ಕಡೆ ಶಾಲಾ ಕಟ್ಟಡಗಳನ್ನು ಒದಗಿಸಿಕೊಡಲಾಗುವುದು. ಈ ವರ್ಷ ನಾವು ಈ ಬಾಬಿಗೆ ಜಾಸ್ತಿ ಹಣವನ್ನು ಇಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ತಾರತಮ್ಯವಾಗಿದೆ ಎಂದು ನೇರವಾಗಿ ತಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ತಾವು ನೇರವಾಗಿ ಉತ್ತರ ಕೊಡುವುದು ಒಳ್ಳೆಯದು. ಯಾವಾಗ ಈ ತಾರತಮ್ಯವನ್ನು ಸರಿದೂಗಿಸುತ್ತೀರಿ ಎಂದು ಖಚಿತವಾಗಿ ಹೇಳಿ.

ಶ್ರೀ ಡಿ. ಮಂಜುನಾಥ್.--ನಾನು ನೇರವಾಗಿಯೇ ಉತ್ತರ ಹೇಳಿದ್ದೇನೆ. ಮುಂದಿನ ಸಲ ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿನ ಹಣ ಕೊಡುವುದಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ. ೬(೭೩) ಮತ್ತು ಪ್ರಶ್ನೆ ಸಂಖ್ಯೆ. ೭(೨೬೫) ಮಾನ್ಯ ಸದಸ್ಯರ ಪ್ರಶ್ನೆಗಳನ್ನು ಮುಂದೂಡಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.--ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ಮುಂದೂಡುವಂತೆ ನಾನು ತಮಗೆ ಪತ್ರ ಬರೆದಿದ್ದೆ. ಆದರೆ ಮುಂದೂಡುವಂತಹ ಅವಶ್ಯಕತೆ ಇಲ್ಲ. ಈಗಲೇ ನಾನು ಮಾನ್ಯ ಸದಸ್ಯರು ಪ್ರಶ್ನೆಗಳಿಗೆ ಉತ್ತರ ಹೇಳಿ ಎಂದರೆ ಹೇಳುತ್ತೇನೆ.

ಅಧ್ಯಕ್ಷರು.--ತಾವು ರೆಡಿಯಾಗಿದ್ದರೆ ಉತ್ತರ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.--ಮಾನ್ಯ ಸದಸ್ಯರು ರಾಜ್ಯದ ಎಲ್ಲಾ ತಾಲ್ಲೂಕು ಪ್ರವಾಸಿ ಮಂದಿರಗಳಲ್ಲಿ ದೂರವಾಣಿ ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ಹೇಳುವುದಾದರೆ ಕೆಲವು ಪ್ರವಾಸಿ ಮಂದಿರಗಳಿಗೆ ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇನ್ನು ಕೆಲವು ತಾಲ್ಲೂಕು ಪ್ರವಾಸಿ ಮಂದಿರಗಳಿಗೆ ದೂರವಾಣಿ ವ್ಯವಸ್ಥೆ ಇಲ್ಲ. ಇಲ್ಲದೆ ಇರುವಂತಹ ಪ್ರವಾಸಿ ಮಂದಿರಗಳಿಗೆ ಸಂಪನ್ಮೂಲವನ್ನು ನೋಡಿಕೊಂಡು ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ ೯ (೧೭೩) ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿರುವ ನೀರಾವರಿ ಯೋಜನೆಗಳು.

೪೧ (ಎ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).--ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೬ ಮತ್ತು ೭ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ, ಈ

ಯೋಜನೆಗೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಮೊತ್ತ ಖರ್ಚು ಮಾಡಲಾಗಿದೆ. ಜಿಲ್ಲಾವಾರು ಹಾಗೂ ಯೋಜನಾವಾರು ಖರ್ಚಿನ ವಿವರಗಳನ್ನು ಕೊಡುವುದು ?

ಆ) ಕೋಲಾರ ಜಿಲ್ಲೆಗೆ ಎಷ್ಟು ಭಾರಿ, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ತಲಾ ಕೈಗೊಳ್ಳಲಾಗಿದೆ, ಇದಕ್ಕೆ ತಗಲಿರುವ ಮೊತ್ತವೆಷ್ಟು ?

ಇ) ಕೋಲಾರ ಜಿಲ್ಲೆ ಸತತವಾಗಿ ಕ್ಷಾಮ ಮತ್ತು ಬರಗಾರಗಳಿಗೆ ತುತ್ತಾಗಿರುವುದರಿಂದ ಈ ಬವಣೆಯನ್ನು ತಪ್ಪಿಸಿ ರೈತರಿಗೆ ಸಹಾಯ ಮಾಡಲು ಆದ್ಯತೆಯ ಮೇಲೆ ಹೆಚ್ಚಾಗಿ ಸಣ್ಣ ನೀರಾವರಿ ಯೋಜನೆಗಳು, ಅಪ್ಪರ್ ಭದ್ರಾ ಕಾಲುವೆ, ಪಾಲಾರ್, ಪೆನ್ನಾರ್, ಚಿತ್ರಾವತಿ, ಪಾಪಾಗ್ನಿ ಕೌಂಡಿನ್ಯಾ ಸಂದಮಾನ್, ಮಾರ್ಕಂಡೇಯ, ಮತ್ತಿಕೆರೆ ನದಿಗಳ ಜಲಾಶಯ ಪ್ರದೇಶಗಳ ಅಭಿವೃದ್ಧಿ ಮತ್ತು ಅಚ್ಚುಕಟ್ಟು ಅಭಿವೃದ್ಧಿ ನೀರಾವರಿ ಅಭಿವೃದ್ಧಿ ಮತ್ತು ಶೇಖರಣೆ ಕ್ರಮಗಳು ಮತ್ತು ಯೋಜನೆಗಳನ್ನು ತೆಗೆದುಕೊಳ್ಳಬೇಕೆಂಬ ಬೇಡಿಕೆ ಸರ್ಕಾರದ ಮುಂದೆ ಇದೆಯಲ್ಲವೆ ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಯೋಜನೆಗಳು ಯಾವುವು ? ಇತರೆ ಜಿಲ್ಲೆಗಳಿಗೆ ಹೋಲಿಸಿ ನೋಡಿದಲ್ಲಿ ಕೋಲಾರ ಜಿಲ್ಲೆಗೆ ತಾರತಮ್ಯವಾಗಿದೆ ಎಂಬ ದೂರಿಲ್ಲವೆ. ಕೋಲಾರ ಜಿಲ್ಲೆಗೆ ಇತರೆ ಜಿಲ್ಲೆಗಳಂತೆ ಅನುದಾನ ಕೊಟ್ಟು ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ) ೧. ಆರನೇ ಯೋಜನೆಯಲ್ಲಿ ತೆಗೆದುಕೊಳ್ಳಲಾದ ನೀರಾವರಿ ಕಾಮಗಾರಿಗಳು.

ಭಾರಿ ನೀರಾವರಿ ೨ (ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ತಲಾ ಒಂದು)
ಮಧ್ಯಮ ನೀರಾವರಿ ೨ (ಎರಡೂ ಮೈಸೂರು ಜಿಲ್ಲೆಯಲ್ಲಿ)
ಸಣ್ಣ ನೀರಾವರಿ ೧೩೩೪ (ಜಿಲ್ಲಾವಾರು ಸಂಖ್ಯೆಗಳನ್ನು ಲಗತ್ತಿಸಲಾಗಿರುವ ಪಟ್ಟಿ ಸಂಖ್ಯೆ—೧ರ ೭ನೇ ಕಾಲಂನಲ್ಲಿ ನಮೂದಿಸಲಾಗಿದೆ)

೨. ಏಳನೇ ಯೋಜನೆಯಲ್ಲಿ ಈವರೆಗೆ ತೆಗೆದುಕೊಂಡಿರುವ ನೀರಾವರಿ ಕಾಮಗಾರಿಗಳು ಭಾರಿ ಮತ್ತು ಮಧ್ಯಮ ನೀರಾವರಿ–ಯಾವುದೂ ಇಲ್ಲ.

ಸಣ್ಣ ನೀರಾವರಿ ೨೪೧ (ಜಿಲ್ಲಾವಾರು ಸಂಖ್ಯೆಗಳನ್ನು ಲಗತ್ತಿಸಲಾಗಿರುವ ಪಟ್ಟಿ ಸಂಖ್ಯೆ—೧ರ ೮ನೇ ಕಾಲಂನಲ್ಲಿ ನಮೂದಿಸಲಾಗಿದೆ.)

೩. ೬ನೇ ಯೋಜನೆಯಲ್ಲಿ ಮಾಡಿದ ವೆಚ್ಚ

ಭಾರಿ ನೀರಾವರಿ ರೂ. ೧೩೫ ಲಕ್ಷ
ಮಧ್ಯಮ ನೀರಾವರಿ ರೂ. ೬೬ ಲಕ್ಷ
ಸಣ್ಣ ನೀರಾವರಿ ರೂ. ೮೧೧೦ ಲಕ್ಷ
} ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿ ಸಂಖ್ಯೆ—೨ರ ೩ನೇ ಕಾಲಂನಲ್ಲಿ ನಮೂದಿಸಲಾಗಿದೆ.

೪. ೭ನೇ ಯೋಜನೆಯಲ್ಲಿ ಇದುವರೆಗೆ (ಜೂನ್ ೩೦, ೧೯೮೬ ರವರೆಗೆ) ಮಾಡಿರುವ ವೆಚ್ಚ.

ಭಾರಿ ನೀರಾವರಿ ರೂ. ೯೯ ಲಕ್ಷ
ಮಧ್ಯಮ ನೀರಾವರಿ ರೂ. ೭೬ ಲಕ್ಷ
ಸಣ್ಣ ನೀರಾವರಿ ರೂ. ೩೫೫೬ ಲಕ್ಷ
} ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿ ಸಂಖ್ಯೆ—೨ರ ೪ನೇ ಕಾಲಂನಲ್ಲಿ ನಮೂದಿಸಲಾಗಿದೆ,

ಆ) ೧) ಕೋಲಾರ ಜಿಲ್ಲೆಯಲ್ಲಿ ಆರನೇ ಯೋಜನೆಯಲ್ಲಾಗಲಿ ಅಥವಾ ಈವರೆಗೆ ಏಳನೇ ಯೋಜನೆಯಲ್ಲಾಗಲಿ ಭಾರಿ ಅಥವಾ ಮಧ್ಯಮ ಯೋಜನೆಗಳನ್ನು ತೆಗೆದುಕೊಂಡಿರುವುದಿಲ್ಲ ಆದರೆ, ಆರನೇ ಯೋಜನೆಯಲ್ಲಿ ೧೧೩೩ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದ್ದು ಅವುಗಳ ಪೈಕಿ ೭೭ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಪೂರ್ಣಗೊಳ್ಳದೆ ಇರುವ ೩೬ ಕಾಮಗಾರಿಗಳೂ ಸೇರಿದಂತೆ, ಏಳನೇ ಯೋಜನೆಯಲ್ಲಿ ಇದುವರೆಗೆ ೪೫೫ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿ ಸಂಖ್ಯೆ—೩ರಲ್ಲಿ ಕೊಡಲಾಗಿದೆ.

೨. ಕೋಲಾರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಮೇಲೆ ಆರನೇ ಯೋಜನೆಯಲ್ಲಿ ೩೧೬ ಲಕ್ಷ ರೂಪಾಯಿಗಳನ್ನೂ ಮತ್ತು ಏಳನೇ ಯೋಜನೆಯಲ್ಲಿ ಈವರೆಗೆ (ಜೂನ್ ೧೯೮೬ರ ಅಂತ್ಯದವರೆಗೆ) ೧೬೬ ಲಕ್ಷ ರೂಪಾಯಿಗಳನ್ನೂ ವೆಚ್ಚ ಮಾಡಲಾಗಿದೆ.

೩) ಹೌದು.

ಈ) ಕೋಲಾರ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಸಣ್ಣ ನೀರಾವರಿ ಕಾಮಗಾರಿಗಳ ವಿವರಗಳಿಗೆ (ಆ) ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ದಯವಿಟ್ಟು ನೋಡುವುದು. ಕೋಲಾರ ಜಿಲ್ಲೆಗೆ ತಾರತಮ್ಯ ವಾಗಿದೆ ಎಂಬ ದೂರು ಬಂದಿರುವುದಿಲ್ಲ. ಅನ್ಯಾಯವಾಗಿರುವುದಿಲ್ಲ.

STATEMENT I

Districtwise break up of major, medium, and minor projects taken up during Sixth & Seventh Plan.

Sl. No.	District	No. of Projects taken up					
		Majoy		Medium		Minor	
		6th Plan	7th Plan	6th Plan	7th Plan	6th Plan	7th Plan
1	2	3	4	5	6	7	8
1	Bangalore	...	...	...	...	82	14
2	Belgaum	...	...	...	...	104	...
3	Bellary	...	...	...	...	61	7
4	Bidar	...		...	...	39	21
5	Bijapur	...	...	...	...	51	15
6	Chickmagalur	...	...	...	...	50	21
7	Chitradurga	...	...	...	...	31	3
8	Dakshina Kannada	1	...	...	...	36	21
9	Dharwad	...	...	...	...	97	12
10	Gulbarga	...	...	...	...	64	31
11	Hassan	1	...	...	...	104	8
12	Kodagu	...	...	...	...	31	4
13	Kolar	...	...	...	...	113	9
14	Mandya	...	...	...	...	61	8
15	Mysore	...	...	2	...	107	35
16	Raichur	...	...	...	...	73	21
17	Shimoga	...	...	...	...	54	9
18	Tumkur	...	...	...	...	113	2
19	Uttara Kannada	...	...	...	...	63	...
	Total	2	...	2	...	1334	241

STATEMENT II

Expenditure incurred on Major, Medium and Minor Irrigation Projects taken up during Sixth and Seventh Plans.

(Rs. in lakhs)

Sl. No.	Project.	Expenditure incurred during Sixth plan.	Expenditure incurred during Seventh Plan upto 30-6-86.
1	2	3	4
I	MAJOR PROJECTS.		
1	Varahi—I	115	29
2	Yagachi	20	70
	Total (I).	135	99
II.	MEDIUM PROJECTS		
1	Uduthorehalla.	49	21
2	Chikkahole Diversion.	17	55
	Total (II).	66	76
III.	MINOR PROJECTS. (District wise).		
1	Bangalore.	627	262
2	Belgaum.	524	208
3	Bellary.	641	121
4	Bidar.	574	291
5	Bijapur.	409	121
6	Chickmagalur.	95	71
7	Chitradurga.	371	93
8	Dakshina Kannada.	99	50
9	Dharwad.	575	208
10	Gulbarga.	814	915
11	Hassan.	99	71
12	Kodagu.	34	2

1	2	3	4
13	Kolar.	316	166
14	Mandya.	393	116
15	Mysore.	1175	387
16	Raichur.	525	329
17	Shimoga.	298	58
18	Tumkur.	272	107
19	Uttara Kannada.	139	80
	Total (III).	8010	3656
	Total (I to III)	8210	3831

Note —Districtwise expediture is furnished only for minor projects.

STATEMENT—III

LIST OF MINOR IRRIGATION WORKS TAKEN UP SO FAR IN KOLAR DISTRICT DURING SEVENTH PLAN

Sl. No.	Name of the Project	Sl. No.	Name of the Project
1	2	1	2

A) GOWRIBIDANUR TALUK

1	Dandiganahalli Tank	7	Basavanahallli Tank
2	Kamareddipalli Tank	8	Muddaludu Tank
3	Srecnivasacharlahalli Tank	9	Chikkanahosahalli Tank
4	Upparahalli Tank	10	Mudugahalli Tank
5	Manchenahalli Tank	11	Anicut across N. Pennar
6	Sudenahalli Tank		

B) MULBAGAL TALUK

12	Obaleswara Tank	13	Settykal Tank
14	Shankarammanakere Tank		

1	2	1	2

C) SREENIVASAPURA TALUK

15	Badipalli Tank	21	Bhogavanapalli (Site II)
16	Kabirappanakatti Tank	22	Mulagallapura Tank
17	Nagarakatti Tank	23	Kurkonapalli Tank
18	Chiladiganahalli (Shivapura)	24	Nellathur *
19	Diguvadambarapalli	25	Chintamanaipalli *
20	Bhogavanapalli (Site I)	26	Gothur *

D) KOLAR TALUK

27	Gowdahalli	31	Bellambare Tank
28	Hanumanthapura	32	Yakkamaballi Tank (Restoration)
29	Nukanahalli	33	Marenahalli
30	Siddanahalli	34	Kondanahalli Tank

E) BANGARPET TALUK

35	Urukula I	37	Nadagummanahalli Tank
36	Madiganahalli		

F) CHIKKABALLAPURA TALUK

38	Yedaralahalli Tank	40	Gontiganahalli *
39	Bugimadlu Tank	41	Kuchabethi *

G) CHINTHAMANI TALUK

42	Ketharayakallihalli Tank		

H) SIDLAGHATTA TALUK

43	Dimbarahalli Tank	45	Malasudinne
44	Madaiahgeripalli Tank		

(*) Indicates Ganga-Kalyana Schemes.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸಚಿವರಾದ ದೇವೇಗೌಡರು ಉತ್ತರವನ್ನು ಬಹಳ ಚೆನ್ನಾಗಿ ಕೊಡುತ್ತಾರೆ. ಆದರೆ ಈ ಸಾರಿ ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಉತ್ತರವನ್ನು ನೋಡಿದರೆ ತಲೆ ಕೆಳಗಾದ ಉತ್ತರವನ್ನು ಕೊಟ್ಟಿದ್ದಾರೆ. ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ನಾನು ಮಾನ್ಯ ಸಚಿವರನ್ನು ಯು.ಕೆ.ಪಿ. ಅಥವಾ ಹೇಮಾವತಿ ಪ್ರಾಜೆಕ್ಟ್‌ಗಳ ಬಗ್ಗೆ ಆಂಕಿ ಅಂಶಗಳನ್ನು ಕೊಡಿ ಎಂದು ಕೇಳಲಿಲ್ಲ. ಬೇರೆ ಬೇರೆ ಜಿಲ್ಲೆಗಳಿಗೆ ಸಣ್ಣ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣದ ಆಂಕಿಅಂಶಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ಆ ಬಗ್ಗೆ ನಾನು ಪ್ರಶ್ನೆ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಕೊಟ್ಟಿರತಕ್ಕಂಥ ಉತ್ತರದಲ್ಲಿಯೇ ಸ್ವಲ್ಪ ತಾರತಮ್ಯ ಇದೆ. ಉದಾಹರಣೆಗೆ ತಾವು ಕೊಟ್ಟಿರುವ ಲೆಕ್ಕದ ಪ್ರಕಾರ ಮಂಡ್ಯ ೧೫೬೨ ಇದೆ. ಮೈಸೂರು ೧೫೬೨ ಇದೆ. ಬೆಂಗಳೂರು ಮತ್ತು ಬೆಳಗಾಂ ೯೯ ಇದೆ. ಆದರೆ ನಮ್ಮ ಕೋಲಾರ ಜಿಲ್ಲೆಗೆ ಮಾತ್ರ ೨೦೦ ಮೇಜರ್ ಮತ್ತು ಮೈನರ್ ಇರಿಗೇಷನ್ಸ್ ಕೊಟ್ಟಿದ್ದೀರಿ?

ತುಮಕೂರು ೩೭೯ ಲಕ್ಷ, ಕೋಲಾರ ೪೮೨ ಲಕ್ಷ, ಇದನ್ನು ಹೋಲಿಸಿ ನೋಡಿದರೆ ನಮಗೆ ಹತ್ತರಲ್ಲಿ ಒಂದುಭಾಗವನ್ನೂ ಕೊಟ್ಟಿಲ್ಲ. ನಾನು ಸ್ಪಷ್ಟವಾಗಿ ಕೇಳಿದ್ದೇನೆ. ನಮ್ಮ ಜಿಲ್ಲೆಗೆ ಸತತವಾಗಿ ಕ್ಷಾಮ ಉಂಟು ಇದಕ್ಕೂ ಹೆಚ್ಚಿಗೆ ಅದ್ಯತೆಯನ್ನು ಕೊಡಬೇಕೆಂದು ಕೇಳಿದ್ದೇನೆ, ಅದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ತಾವು ಕೊಟ್ಟಿಲ್ಲ. ಕೋಲಾರದಲ್ಲಿ ಅಪ್ಪರ್ ಭದ್ರಾ ಪ್ರಾಜೆಕ್ಟ್ ಬಗ್ಗೆ ಏನು ಮಾಡಿದ್ದಾರೆ? ಪಾಲಾರ್ ಕಾಲುವೆ ನವಂಗೆ ಬರಬೇಕೆಂದು ಕೇಳಿದ್ದೇವೆ. ಇದರ ಬಗ್ಗೆ ಉತ್ತರ ಇಲ್ಲ ಪೆನ್ನಾರ್ ಚಿತ್ರಾವತಿ, ಪಾಪಾಗ್ನಿ, ಕೌಂಡಿನ್ಯಾ, ಪಂದಮಾನ್. ಮಾರ್ಕೊಂಡೇಯ ಮತ್ತಿತರ ನದಿಗಳ ಅಭಿವೃದ್ಧಿ ಬಗ್ಗೆ ಕೇಳಿರುವ ಪ್ರಶ್ನೆಗೆ ''ಹೌದು'' ಎಂದು ಹೇಳಿದ್ದಾರೆ. ಆದರೆ ಏನು ಮಾಡುತ್ತೇವೆಂಬುದನ್ನು ಹೇಳಲಿಲ್ಲ. ಮಾನ್ಯ ಸಚಿವರು ಬಹಳ ಬುದ್ಧಿವಂತಿಕೆಯಿಂದ ಉತ್ತರ ಕೊಟ್ಟಿದ್ದಾರೆ. ಅವರು ನಮ್ಮ ಕಷ್ಟವನ್ನು ತಿಳಿದುಕೊಂಡು ಹೇಳಿದ್ದರೆ ಚೆನ್ನಾಗಿತ್ತು. ಆದುದರಿಂದ ದಯಮಾಡಿ ನಮ್ಮಲ್ಲಿ ಸತತವಾಗಿ ಕ್ಷಾಮ ಇರುವುದರಿಂದ, ಹೆಚ್ಚು ಅದ್ಯತೆ ಕೊಟ್ಟು, ಹೆಚ್ಚು ಆರ್ಥಿಕ ನೆರವು ಕೊಡುತ್ತೀರಾ ಎಂಬುದನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ. ಸಭೆಗೆ ಯಾವುದನ್ನೂ ನಾನು ಮುಚ್ಚಿಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ತೀರ್ಮಾನದ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ಕೋಲಾರ ಬರಗಾಲ ಜಿಲ್ಲೆ. ಅಲ್ಲಿ ನೀರು ಸಿಕ್ಕುತ್ತಿಲ್ಲ. ನನ್ನ ಉತ್ತರವನ್ನು ದಯಮಾಡಿ ಓದಿ ನಂ. (೩) ಕೋಲಾರ ಜಿಲ್ಲೆ ಸತತವಾಗಿ ಕ್ಷಾಮ ಮತ್ತು ಬರಗಾಲಗಳಿಗೆ ತುತ್ತಾಗಿರುವುದರಿಂದ, ಈ ಬವಣೆಯನ್ನು ತಪ್ಪಿಸಿ ರೈತರಿಗೆ ಸಹಾಯ ಮಾಡಲು ಅದ್ಯತೆಯ ಮೇಲೆ ಸಣ್ಣ ನೀರಾವರಿ ಯೋಜನೆಗಳು ಅಪ್ಪರ್ ಭದ್ರಾ ಕಾಲುವೆ, ಪಾಲಾರ್, ಪೆನ್ನಾರ್, ಚಿತ್ರಾವತಿ, ಪಾಪಾಗ್ನಿ ಕೌಂಡಿನ್ಯಾ, ಪಂದಮಾನ್, ಮಾರ್ಕೊಂಡೇಯ ಮತ್ತಿತರ ನದಿಗಳ ಜಲಾಶಯ ಪ್ರದೇಶಗಳ ಅಭಿವೃದ್ಧಿ ಮತ್ತು ಆಚ್ಚುಕಟ್ಟು ಅಭಿವೃದ್ಧಿ ನೀರಾವರಿ ಅಭಿವೃದ್ಧಿ ಮತ್ತು ಶೇಖರಣೆ ಕ್ರಮಗಳು ಮತ್ತು ಯೋಜನೆಗಳ ಮಾದರಿಯಲ್ಲಿ ತೆಗೆದು ಕೊಳ್ಳಬೇಕೆಂಬ ಬೇಡಿಕೆ ಸರ್ಕಾರದಪರ ಮುಂದೆ ಇದೆಯಲ್ಲವೆ ? ಎಂಬ ಪ್ರಶ್ನೆಗೆ '' ಹೌದು '' ಎಂದು ಹೇಳಿದ್ದೇವೆ...

ಶ್ರೀ ಆರ್. ವೆಂಕಟರಾಮಯ್ಯ.—ನೀವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಯಾವುದನ್ನೂ ಮುಚ್ಚಿಟ್ಟಿಲ್ಲ. ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅಪ್ಪರ್ ಭದ್ರಾ ಕಾಲುವೆ ನೀರು ಕೋಲಾರಕ್ಕೆ ಮಂಟ್ಟುತ್ತದೆ ಎಂದು ಗೊಳುವುದು ಕಷ್ಟವಾಗುತ್ತದೆ.

ಇದರ ಬಗ್ಗೆ ಮನವಿಯನ್ನು ಕೊಡುತ್ತಾರೆ. ಕೋಲಾರಕ್ಕೆ ತೆಗೆದುಕೊಂಡು ಹೋಗುತ್ತೇವೆಂದು ಈ ಸದನದಲ್ಲಿ ಹೇಳುವುದಕ್ಕಾಗುವುದಿಲ್ಲ. ನಾಳೆ ಇದರ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಬಹುದು. ಅಪ್ಪರ್ ಭದ್ರಾ ನೀರು ಎಷ್ಟು, ಅಲ್ಲಿಗೆ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಹೇಳುವುದು ಕಷ್ಟವಾಗಿದೆ. ಆದೇ ರೀತಿ ಮಧ್ಯಮ ನೀರಾವರಿ ಮತ್ತು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಸಣ್ಣ ನದಿಗಳಲ್ಲಿ ನೀರು ಇಲ್ಲ, ಅಲ್ಲಿ ಯಾವರೀತಿ ನೀರನ್ನು ಕೊಡಬೇಕೆಂಬುದನ್ನು ತಾವೇ ಹೇಳಿ. ನಿಮ್ಮ ಜೊತೆ ನಾನೂ ಬರುತ್ತೇನೆ. ಸಣ್ಣ ನೀರಾವರಿಗೆ ಅದ್ಯತೆ ಕೊಡಬೇಕೆಂದು ಹೇಳಿದ್ದಾರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ವಾದ

ವಿವಾದ ಇಲ್ಲ. ತುಮಕೂರು, ಮಂಡ್ಯ ಬಗ್ಗೆ ಹೇಳಿದ್ದಾರೆ ಮಂಡ್ಯಕ್ಕೆ ಮೈನರ್ ಇರಿಗೇಷನ್‌ಗೆ ೩೯೩ ಲಕ್ಷ ಖರ್ಚು ಮಾಡಿದ್ದೇವೆ, ಕೋಲಾರಕ್ಕೆ ೩೧೬ಲಕ್ಷ ಖರ್ಚು ಮಾಡಿದ್ದೇವೆ. ಇನ್ನು ಮೈಸೂರು, ಬೆಳಗಾಂ, ಗುಲ್ಬರ್ಗಾ ಈ ಭಾಗದಲ್ಲಿ ವರ್ಲ್ಡ್ ಬ್ಯಾಂಕ್ ಹಣದ ಸಹಾಯದಿಂದ ಕೆಲಸಗಳು ನಡೆಯುತ್ತಾ ಇವೆ. ಮಂಡ್ಯ ಕೋಲಾರ ಜಿಲ್ಲೆಗಳಿಗೆ ವಿಭಿನ್ನ ರೀತಿಯಲ್ಲಿ ನಡೆದು ಕೊಂಡಿದ್ದೇವೆಂಬ ಭಾವನೆ ಬೇಡ. ಎಲ್ಲೆಲ್ಲಿ ಮೈನರ್ ಇರಿಗೇಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎನ್ನುವುದನ್ನು ನಿಮ್ಮೆಲ್ಲರನ್ನು ಕರೆಯಿಸಿ ನಿಮ್ಮ ಜೊತೆ ಕುಳಿತು ಚರ್ಚೆ ಮಾಡಿ ಅದರ ಬಗ್ಗೆ ಆದ್ಯತೆ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ದೇವೇಗೌಡರು ಹೇಳುವುದನ್ನು ನಾನು ಒಪ್ಪುತ್ತೇನೆ. ಅವರು ವಾಸ್ತವಿಕವಾದ ಅಂಶಗಳನ್ನು ತಿಳಿದುಕೊಂಡು ಹೇಳುತ್ತಿಲ್ಲ, ಮುಚ್ಚಿಡುತ್ತಿದ್ದಾರೆ. ಅಪ್ಪರ್ ಭದ್ರಾ ಕಾಲುವೆ ಶ್ರೀಯುತ ಪರಮಶಿವಯ್ಯನವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅಪ್ಪರ್ ಭದ್ರಾ ಕಾಲುವೆ ನಮ್ಮ ಜಿಲ್ಲೆಗೆ ಬಂದರೆ ನಮ್ಮ ಜಿಲ್ಲೆಯ ಬಹುಭಾಗಕ್ಕೆ ನೀರು ಒದಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು ಮನಸ್ಸು ಮಾಡಿದರೆ ನಮ್ಮ ಕೋಲಾರಕ್ಕೆ ಭದ್ರಾ ಕಾಲುವೆ ನೀರು ಬಿಡಬಹುದು, ಇನ್ನು ಸಣ್ಣ ನೀರಾವರಿ ಬಗ್ಗೆ ಅಂಕಿ ಅಂಶಗಳನ್ನು ಓದಿದರೆ ಒಂದು ಜಿಲ್ಲೆಯಲ್ಲಿ ೮೭೯ ಕೋಟಿ ಕೊಟ್ಟಿದ್ದಾರೆ. ಇನ್ನೊಂದು ಜಿಲ್ಲೆಯಲ್ಲಿ ೮೩೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅಂದರೆ ಸಣ್ಣ ನೀರಾವರಿಯಲ್ಲಿ ಗಂಗಾಕಲ್ಯಾಣ ಯೋಜನೆಗಳನ್ನೂ ಕೊಟ್ಟಿದ್ದಾರೆ. ಇದು ಯೋಜನೆ ಅಲ್ಲ. ಈ ರೀತಿ ಕೊಟ್ಟು ನಮಗೆ ಟೋಪಿ ಹಾಕುವುದು ಬೇಡ ಇದು ನ್ಯಾಯವಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಯಾರೋ ಒಬ್ಬ ಇಂಜಿನಿಯರ್ ಅವರ ಹೆಸರನ್ನು ಹೇಳಿದ್ದಾರೆ. ಅವರು ಈಗಾಗಲೇ ನಿವೃತ್ತರಾಗಿದ್ದಾರೆ. ಅವರು ವರದಿ ಕೊಟ್ಟಿರಬಹುದು, ಆದರೆ ಅವರಿಗಿಂತ ಹೆಚ್ಚು ತಾಂತ್ರಿಕ ಪರಿಣತಿ ಇಟ್ಟುಕೊಂಡಿರುವವರು ಸರ್ಕಾರದ ಸೇವೆಯಲ್ಲಿ ಇದ್ದಾರೆ. ಅವರ ಸಲಹೆ ಗಳಿಗೆ ನಾವು ಆದ್ಯತೆಯನ್ನು ಕೊಡಬೇಕು. ಇವತ್ತಿನ ದಿವಸ ದೇಶದಲ್ಲಿ ಹೆಸರಾಂತ, ಇಂಜಿನಿಯರಲ್ಲಿ ಒಬ್ಬರಾದ ಶ್ರೀಮಾನ್ ಬಾಳಿಕಾಂದ್ರಿಯವರು ಇದ್ದಾರೆ ಇಂತಹವರು ಕೊಡುವ ಸಲಹೆಯನ್ನು ಬಿಟ್ಟು ಯಾರೋ ಒಬ್ಬರು ಹೇಳಿದ್ದಾರೆಂದು ನಾನು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಈ ರಾಜ್ಯದಲ್ಲಿ ಇರತಕ್ಕ ಜಲಸಂಪತ್ತನ್ನು ಯಾವ ರೀತಿಯಿಂದಲೂ ಅಪವ್ಯಯ ಆಗುವುದಕ್ಕೆ ಬಿಡದೆ ಕೆಲಸ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮನಸ್ಸು ಮಾಡಿದರೆ ಆಗುತ್ತದೆ, ತಾವು ದಯಮಾಡಿ ಸರಿಯಾಗಿ ಹೇಳಿ,

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ಮಾನ್ಯ ಸದಸ್ಯರಿಗೆ ಆಶಾದಾಯಕ ಉತ್ತರ ಕೊಟ್ಟುಬಿಡಿ.

ಶ್ರೀ ಸಿ. ಭೈರೇಗೌಡ.—ಅಪ್ಪರ್ ಭದ್ರಾ ಕಾಲುವೆಯಿಂದ ಕೋಲಾರ ಜಿಲ್ಲೆಗೆ ನೀರು ಬರುವುದಿಲ್ಲ, ಆಲ್ಲಿ ವಂಚಿ ಬರುವುದಿಲ್ಲ, ಕೆರೆಯೂ ತುಂಬುವುದಿಲ್ಲ ಹಾಗಾದರೆ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿ ಸುವುದಕ್ಕೆ ಸರ್ಕಾರ ಏನು ಆಲೋಚನೆ ಮಾಡಿದೆ?

ಶ್ರೀ ಹೆಚ್.ಡಿ. ದೇವೇಗೌಡ.—ಎಲ್ಲೆಲ್ಲಿ ಭೂಗರ್ಭದಲ್ಲಿ ಜಲ ಸಿಕ್ಕುತ್ತದೆ, ಅದನ್ನು ಉಪಯೋಗ ಮಾಡಿಕೊಂಡು, ಇತಿಮಿತಿ ಇಲ್ಲದೆ ಕೋಲಾರ ಜಿಲ್ಲೆಯಲ್ಲಿ ಕೆಲಸ ತೆಗೆದುಕೊಳ್ಳಿ ಎಂದು ಅವರೇ ಹೇಳಿ ದ್ದಾರೆ. ನಾನೂ ಈಗಲೂ ಮತ್ತೊಂದು ಸಾರಿ ಹೇಳುತ್ತೇನೆ, ಸಣ್ಣ ನೀರಾವರಿ ಯೋಜನೆಗಳನ್ನು ಎಷ್ಟು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳ ಶಾಸಕರನ್ನು ಕರೆಯಿಸುತ್ತೇನೆ, ಅವರು ಯಾವ ಯಾವುದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ ಅವುಗಳಿಗೆ ಆದ್ಯತೆಯನ್ನು ಕೊಟ್ಟು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ.—ಈ ತಿಂಗಳು ೧೧ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ರಂಗಧಾಮ, ಬಾಗೆಪಲ್ಲಿ, ಪೊಂಡಮಾನ್ ಜಲಾಶ ಯದಿಂದ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ್ದಾರೆ. ಇದನ್ನು ಈ ವರ್ಷದಲ್ಲಿಯೇ ಮಾಡಿಸಿ ಕೊಡುತ್ತೀರಿ ಎನ್ನುವ ಬಗ್ಗೆ ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಸರ್ಕಾರ ತೀರ್ಮಾನವಾಗಿ ಪರಿಗಣಿಸುತ್ತದೆ. ಹಾಗೂ ಅದಕ್ಕೆ ಬೇಕಾದ ತಾಂತ್ರಿಕ ಮಾಹಿತಿಯನ್ನು ತರಿಸಿಕೊಂಡು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ಶ್ರೀಮಾನ್ ದೇವೇಗೌಡರು, ನಾವು ಯಾವ ಪ್ರಶ್ನೆಯನ್ನು ಕೇಳಿದರೂ, ಆಶ್ವಾಸನೆಗಳನ್ನು ಕೊಟ್ಟುಕೊಂಡೇ ಬಂದಿದ್ದಾರೆ. ಆಶ್ವಾಸನೆಗಳನ್ನು ಕೊಟ್ಟು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎನ್ನುವುದನ್ನು ಹೇಳಬೇಕು. ಈಗ ಬಜೆಟ್ ಆಯಿತು. ಆಯವ್ಯಯ ವೈಜ್ಞಾನಿಕವಾಗಿ ಸುಮಾರು ನಾಲ್ಕೂವರೆ ತಿಂಗಳು ಆಯಿತು. ಇಷ್ಟಾದರೂ ಅನ್ಯುಯಲ್ ಪ್ಲಾನ್ ಅಪ್ರೂವಲ್ ಆಗಿಲ್ಲ. ಅದ್ದುದರಿಂದ ಬಜೆಟ್‌ಗೆ ಮಾನ್ಯತೆ ಇಲ್ಲ, ಇನ್ನು ನಿಮ್ಮ ಆಶ್ವಾಸನೆಗೆ ಎಷ್ಟು ಮಾನ್ಯತೆ ಇದೆ...?

ಶ್ರೀ ಹೆಚ್. ಡಿ. ದೇವೇಗೌಡ.— ನಮ್ಮ ಆಶ್ವಾಸನೆಗಳನ್ನು ಪರಿಶೀಲನೆ ಮಾಡುವುದಕ್ಕೆ ಸದನದ ಸಮಿತಿ ಇದೆ. ಅಷೂರೆನ್ಸ್ ಕಮಿಟಿ ಇದೆ. ಅಷೊರೆನ್ಸ್ ಕಮಿಟಿಯವರು ಇದನ್ನು ನೋಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಒಂದು ಅಷೂರೆನ್ಸ್ ಕಮಿಟಿ ಇದೆ, ಇನ್ನೊಂದು ಅಷೂರೆನ್ಸ್ ಕಮಿಟಿ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ ದೇವೇಗೌಡ.— ಸದನದಲ್ಲಿ ಮಾನ್ಯ ಮಂತ್ರಿಗಳು ಅಷೂರೆನ್ಸ್ ಕೊಟ್ಟು, ಆ ಕೆಲಸ ಆಗದೇಹೋದರೆ ಅವರ ಮೇಲೆ ಕಂಟೆಮ್ಪ್ಟ್ ಮೂವ್ ಮಾಡುವುದಕ್ಕೆ ಸಾಧ್ಯತೆ ಇದೆ.

ಆದರೆ ನಾನು ಇಷ್ಟನ್ನು ಹೇಳುತ್ತೇನೆ. ನಾನು ಏನು ಯೋಜನೆಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಅವಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಹಿಂದೆ ಬಿದ್ದಿಲ್ಲ ನಾನು ಯಾವುದೇ ಉತ್ತರವನ್ನು ಕೊಡುವಾಗ, ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇದ್ದರೆ ಮಾತ್ರ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಆರಂಭ ಶೂರತ್ವ ಮಾಡಿದ್ದೀರಿ

ಶ್ರೀ ಹೆಚ್. ಡಿ. ದೇವೇಗೌಡ.— ಹಾಗೇನಿಲ್ಲ, ಯಾವುದಾದರೂ ಕೆಲಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರೆ, ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಆರಂಭ ಶೂರತ್ವ ಮಾಡಿದ್ದೀರಿ

SRI. H. D. DEVEGOWDA.— You are a senior leader you cannot talk like this.

SRI. B. BASAVALINGAPPA.— Whether senior or junior....

SRI. H. D. DEVEGOWDA — He is a responsible leader. ನಾನು ತಪ್ಪನ್ನು ಬರೀ ಟೀಜ್ಞೇಟರ್ ಎಂದು ಕರೆಯುತ್ತಿಲ್ಲ. ತಾವು ಒಬ್ಬ ರೆಸ್ಪಾನ್ಸಿಬಲ್ ಲೀಡರ್ ಆಫ್ ದಿಸ್ ಹೌಸ್. ಈ ಸಭೆಯಲ್ಲಿ ನಾನು ಯಾವುದಾದರೂ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದುದನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರೆ then I will express my apology to this House

ಬೆಳಗಾವಿ ಜಿಲ್ಲೆಯ ನೀರಾವರಿ ಯೋಜನೆಗಳು

೧೦೯. ಪ್ರೊ. ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಶಿರೂರು (ರಂಗದ ಹೊಳೆ) ಆಣೆಕಟ್ಟಿನ ನಿರ್ಮಾಣದ ಕಾರ್ಯ ಯಾವ ಹಂತದಲ್ಲಿದೆ ?

ಆ) ನೀರು ನಷ್ಟ ಅಂದಾಜು ಪತ್ರಿಕೆ ಹಾಗೂ ಸರಕಾರದ ಮಂಜೂರಾತಿ ಇವುಗಳನ್ನು ಪೂರ್ಣಗೊಳಿಸಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?